**ಒ ಎಸ್ ನಂ. 12/2012 ಡಿಡಬ್ಲೂ-5**

**ದಿನಾಂಕಃ 06.04.2021.ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ-ಶ್ರೀ ಆರ್ ಎಲ್ ವಾದಿ ಪರ ವಕೀಲರಿಂದಃ**

ನಿಮಗೆ ಕನ್ನಡ ಓದಲು ಬರೆಯಲು ಬರುತ್ತದಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಸರ್ವೆ ನಂಬರ್ಃ 106 ರ ಜಮೀನಿನಲ್ಲಿ ಜವರೇಗೌಡರೇ ಅನುಭವದಲ್ಲಿ ಇದ್ದಾರೆ ಎಂದು ನನ್ನ ಮುಖ್ಯ ವಿಚಾರಣೆ ನೀಡಿದ್ದೇನೆ. ಸರ್ವೆ ನಂಬರ್ಃ 106 ರಲ್ಲಿ ಒಟ್ಟು 5 ಚಿಲ್ಲರೆ ಎಕರೆಯಷ್ಟು ಜಮೀನು ಇದೆ. ಮುಖ್ಯ ವಿಚಾರಣೆಯಲ್ಲಿ ಯಾವ ಯಾವ ಸರ್ವೆ ನಂಬರ್ ಗಳ ಬಗ್ಗೆ ಹೇಳಿ ಬರೆಸಿದ್ದಿರೀ ಎಂದರೆ ಸಾಕ್ಷಿ ಸರ್ವೆ ನಂಬರ್ಃ 106 ರ ಬಗ್ಗೆ ಮಾತ್ರ ಎನ್ನುತ್ತಾರೆ. ಬೇರೆ ಯಾವುದೇ ಸರ್ವೆ ನಂಬರ್ ಸಂಬಂಧ ನೀವು ಮುಖ್ಯ ವಿಚಾರಣೆಯಲ್ಲಿ ಬರೆಸಿಲ್ಲವಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಅಡೇನಹಳ್ಳಿ ಗ್ರಾಮವೇ ಬೇರೆ ಮತ್ತು ಕೆ. ಕಾಳೇನಹಳ್ಳಿ ಗ್ರಾಮವೇ ಬೇರೇ ಎಂದರೆ ಸಾಕ್ಷಿ ಹೌದು ಆದರೆ ಅವು ಅಕ್ಕಪಕ್ಕ ಇವೆ ಎನ್ನುತ್ತಾರೆ. ಕೆ. ಕಾಳೇನಹಳ್ಳಿಯಲ್ಲಿ ನಿಮಗೆ ಸೇರಿದ ಜಮೀನು ಇಲ್ಲ ಎಂದರೆ ಸಾಕ್ಷಿ ಗಡಿಯಲ್ಲಿ ನನ್ನ ಜಮೀನು ಇದೆ ಎನ್ನುತ್ತಾರೆ. ಸದರಿ ದಾವಾ ಕೆ.ಕಾಳೇನಹಳ್ಳಿ ಗ್ರಾಮದ ಸ್ವತ್ತುಗಳ ಸಂಬಂಧ ಇದೆ. ಕೊಳವೆ ಬಾವಿ ಸದರಿ ಸರ್ವೆ ನಂಬರ್ ನಲ್ಲೇ ಇದೆ ಎನ್ನುವುದಕ್ಕೆ ದಾಖಲೆ ಹಾಜರು ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಆದರೆ ನಾನು ನೋಡಿದ್ದೇನೆ ಎನ್ನುತ್ತಾರೆ. ನೀವು ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಳಾಸದಲ್ಲಿ ವಾಸ ಇರುವುದನ್ನ ತೋರಿಸಲು ಆಧಾರ್ ಕಾರ್ಡ್ ಅಥವಾ ಇತರೆ ದಾಖಲೆಗಳನ್ನ ನ್ಯಾಯಾಲಯಕ್ಕೆ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ.

ನೀವು ಸರ್ವೆ ನಂಬರ್ಃ 88/ಪಿ18 ರ ಜಮೀನಿನ ಆರ್ ಟಿ ಸಿ ಯನ್ನ ನ್ಯಾಯಾಯಕ್ಕೆ

ಹಾಜರು ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಸಾಕ್ಷ್ಯ ನುಡಿಯಲು ನ್ಯಾಯಾಯದಿಂದ ಸಮನ್ಸ್ ಬಂದಿತ್ತಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಜವರೇಗೌಡನಿಗೆ ಸದರಿ ಸರ್ವೆ ನಂಬರ್ ನಲ್ಲಿ ಜಮೀನು ಮಂಜೂರು ಆಗಿತ್ತು. ಯಾವ ಇಸವಿಯಲ್ಲಿ ಮತ್ತು ಎಷ್ಟು ವಿಸ್ತೀರ್ಣ ಮಂಜೂರು ಆಗಿತ್ತು ಎಂದು ನನಗೆ ಗೊತ್ತಿಲ್ಲ. ಸರ್ವೆ ನಂಬರ್ಃ 106 ರ ಹಳೆಯ ಸರ್ವೆ ನಂಬರ್ಃ 60 ಎನ್ನುತ್ತಾರೆ. ಸರ್ವೆ ನಂಬರ್ಃ 60 ರಲ್ಲಿ ಒಟ್ಟು ವಿಸ್ತೀರ್ಣದ ಜಮೀನು ಇತ್ತು ಎಂದರೆ ಸಾಕ್ಷಿ ಸುಮಾರು 100-150 ಎಕರೆ ಇತ್ತು ಎನ್ನುತ್ತಾರೆ. ಆ ಸ್ವತ್ತಿನಲ್ಲಿ ಯಾರು ಯಾರಿಗೆ ಜಮೀನು ಮಂಜುರಾಗಿದೆ ಎಂದು ನನಗೆ ಹೇಳಲಾಗುವುದಿಲ್ಲ. ಕೆ. ಕಾಳೇನಹಳ್ಳಿ ಜಮೀನಿನ ಬಗ್ಗೆ ನಿಮಗೆ ಯಾವುದೇ ವಿಷಯ ಗೊತ್ತಿಲ್ಲದೇ ಇದ್ದರೂ ಕೂಡ ಜವರೇಗೌಡರ ಮಾತನ್ನ ಕೇಳಿಕೊಂಡು ಬಂದು ಸುಳ್ಳು ಸಾಕ್ಷಿ ಹೇಳುತ್ತಿದ್ದಿರಿ ಎಂದರೆ ಸರಿಯಲ್ಲ. ಜವರೇಗೌಡ ಮತ್ತು ನೀವು ಹಾಗೂ ವಾಭೇಗೌಡ, ಸಿದ್ದೇಗೌಡ, ದೇವರಾಜೇಗೌಡ ಎಲ್ಲರೂ ಒಂದೇ ಮತದವರು ಎಂದರೆ ಸಾಕ್ಷಿ ಸರಿಯಲ್ಲ ಎನ್ನುತ್ತಾರೆ. ವಾಭೇಗೌಡರನ್ನ ಬಿಟ್ಟು ಉಳಿದವರು ನಾವೆಲ್ಲಾ ಒಂದೇ ಮತದವರು ಎನ್ನುತ್ತಾರೆ. ನೀವೆಲ್ಲಾ ಸಂಬಂಧಿಕರು ಎಂದರೆ ಸಾಕ್ಷಿ ಸರಿಯಲ್ಲ ಎನ್ನುತ್ತಾರೆ.

ಸರ್ವೆ ನಂಬರ್ಃ 60 ರಲ್ಲಿ ಕೆಂಪಮ್ಮನವರಿಗೆ 4 ಎಕರೆ ಜಮೀನು ಮಂಜೂರಾಗಿರುವ ವಿಚಾರ ಗೊತ್ತಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಕೆಂಪಮ್ಮನನ್ನ ನಾನು ನೋಡಿಲ್ಲ ಎನ್ನುತ್ತಾರೆ. ವಾದಿ ಕೆಂಪಮ್ಮನಿಂದ ಆ ಜಮೀನನ್ನ ಕೊಂಡು ಈಗಲೂ ಸ್ವಾದೀನದಲ್ಲಿ ಇದ್ದಾರೆ ಎಂದರೆ ಸಾಕ್ಷಿ ಸರಿಯಲ್ಲ ಎನ್ನುತ್ತಾರೆ. ಸರ್ವೆ ನಂಬರ್ಃ 106 ರ ಜಮೀನನ್ನ ಪೊಟೋದಲ್ಲಿ ಗುರುತಿಸಲಾಗುತ್ತದಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಈಗ ತೋರಿಸುತ್ತಿರುವ ಪೊಟೋ ದಲ್ಲಿ

ಇರುವ ತೆಂಗಿನ ಮರಗಳು ಹಾಗೂ ಜಮೀನು ಸರ್ವೆ ನಂಬರ್ಃ 106 ರ ಜಮೀನ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಸದರಿ ಪೊಟೋವನ್ನ ನಿಪಿ-11 ಎಂದು ಗುರುತಿಸಲಾಯಿತು. ನಿಪಿ-11 ರಲ್ಲಿ ಈಗ 2 ವರ್ಷದ ಹಿಂದೆ 2018-19 ನೇ ಸಾಲಿನಲ್ಲಿ ವಾದಿ ಸದರಿ ಸ್ವತ್ತನ್ನ ಮಟ್ಟ ಮಾಡಿಸುತ್ತಿಸುದ್ದಾರೆ ಎಂದರೆ ಸಾಕ್ಷಿ ಜನಿವಾರದಿಂದ ಜಮೀನು 2 ಕಿ ಮೀಟರ್ ದೂರದಲ್ಲಿ ಇದ್ದು ವಾದಿ ಯಾವಾಗಲೋ ಬಂದು ಆ ಪೋಟೋ ತೆಗೆಸಿಕೊಂಡಿದ್ದಾರೆ ಎನ್ನುತ್ತಾರೆ. ಸಾಕ್ಷಿ ಮುಂದುವರೆದು ಜವರೇಗೌಡರು ಇಲ್ಲದೇ ಇದ್ದಾಗ ಪೋಟೋ ತೆಗೆದುಕೊಂಡಿದ್ದಾರೆ ಎನ್ನುತ್ತಾರೆ. ಜೆ ಸಿ ಬಿ, ಟ್ರಾಕ್ಟರ್ ಗಳನ್ನ ಉಪಯೋಗಿಸಿಕೊಂಡು ಜಮೀನು ಮಟ್ಟ ಮಾಡುವ ಕೆಲಸ ಕೆಲವು ಗಂಟೆಗಳಾ ಅಥವಾ ಒಂದು ದಿನದ ಮಟ್ಟಿಗೆ ಮಾಡುವೆ ಕೆಲಸ ಅಲ್ಲಾ ಎಂದರೆ ಸಾಕ್ಷಿ ಸರಿಯಲ್ಲ ಎನ್ನುತ್ತಾರೆ. ವಾದಿ 2018-19 ರಲ್ಲಿ ಜಮೀನನನ್ನ ಮಟ್ಟ ಮಾಡಿಸಿಕೊಂಡು ಈಗಲೂ ಕುಡ ಅದರಲ್ಲಿ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸಾಕ್ಷಿ ಸರಿಯಲ್ಲ ಎನ್ನುತ್ತಾರೆ. ವಾದಿ ಮಡಿವಾಳಶೆಟ್ಟಿ ಜನಾಂಗಕ್ಕೆ ಸೇರಿರುವ ಕಾರಣ ಮತ್ತು ಸುತ್ತಮುತ್ತ ನೀವು ಇರುವವರೆಲ್ಲಾ ಒಕ್ಕಲಿಗ ಸಮುದಾಯಕ್ಕೆ ಸೇರಿರುವ ಕಾರಣ ವಾದಿಗೆ ತೊಂದರೆ ನೀಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದಿರಿ ಎಂದರೆ ಸರಿಯಲ್ಲ.

ನಿಮಗೆ ದಾವ ಸ್ವತ್ತಿನ ಪಕ್ಕದಲ್ಲಿ ಜಮೀನು ಇದೆ ಎಂದು ಹೇಳಿದ್ದು ಅದು ಮಂಜೂರಾದ ಜಮೀನಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಸರ್ವೆ ನಂಬರ್ಃ 60 ರಲ್ಲಿ ಸುಮಾರು 30-40 ಜನರಿಗೆ ಜಮೀನು ಮಂಜೂರಾಗಿದೆ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಮಂಜೂರಾದ ಜಮೀನಗಳ್ಳು ಮಾರಾಟ ಮಾಡಿದ್ದು ಕೊಂಡುಕೊಂಡಿರುವವರೇ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸಾಕ್ಷಿ ಸರಿಯಲ್ಲ ಎನ್ನುತ್ತಾರೆ. ಸರ್ವೆ ನಂಬರ್ಃ 60 ಪೋಡಿ ಆಗಿದೆಯಾ ಎಂದರೆ ಸಾಕ್ಷಿ ಹೌದು

ಎನ್ನುತ್ತಾರೆ. ಸರ್ವೆ ನಂಬರ್ಃ 106 ರ ಬ್ಲಾಕ್ ನಂಬರ್ ಎಷ್ಟು ಗೊತ್ತಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಜವರೇಗೌಡ ಸರ್ವೆ ನಂಬರ್ಃ 106 ರಲ್ಲಿ ಸ್ವಾದೀನದಲ್ಲಿ ಇಲ್ಲಾ ಮತ್ತು ಅದರಲ್ಲಿ ಅವರು ವ್ಯವಸಾಯ ಮಾಡುತ್ತಿಲ್ಲ ಆದರು ಕೂಡ ಅವರಿಗೆ ಅನುಕೂಲ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದಿರಿ ಎಂದರೆ ಸರಿಯಲ್ಲ. ಸಾಕ್ಷಿ ಹೇಳಲು ಜವರೇಗೌಡರ ಮಗ ಲೊಕೇಶ ಮತ್ತು ನೀವು ಎಲ್ಲರೂ ಒಟ್ಟಿಗೆ ಬಂದಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ನಾನೆಲ್ಲೋ ಬೇರೆ ಕಡೆ ಹೋಗಿದ್ದೆ ಎನ್ನುತ್ತಾರೆ. ನೀವು ಲೊಕೇಶನ ಪರವಾಗಿ ಅವರ ಕೋರಿಕೆ ಮೇರೆಗೆ ಸಾಕ್ಷಿ ಹೇಳಲು ಬಂದಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎನ್ನುತ್ತಾರೆ.

ಮರುವಿಚಾರಣೆಃ ಇಲ್ಲ

ನನ್ನಃ ಉಃಲೇಃಕ್ಕೆಃ ಬೆರಳಚ್ಚು ಮಾಡಲಾಗಿದೆ

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು

ಪ್ರದನ್ಯಾದಂ, ಚನ್ನರಾಯಪಟ್ಟಣ

OS 12/2012
DW-5